ಆಧ್ಯಾತ್ಮಿಕ ಉಪಾಯ : ದೃಷ್ಟಿ - ಖಂಡ ೧

# ಉಪ್ಪು-ಸಾಸಿವೆ, ತೆಂಗಿನಕಾಯಿ, ಲಿಂಬೆ ಇತ್ಯಾದಿಗಳಿಂದ ದೃಷ್ಟಿ ಹೇಗೆ ತೆಗೆಯಬೇಕು ?

## (ದೃಷ್ಟಿಯ ಬಗ್ಗೆ ಶಾಸ್ತ್ರೀಯ ವಿವೇಚನೆ ಸಹಿತ)

(How to cast off the evil-eye with rock salt and mustard, coconut, Lime etc. ?) ಕನ್ನಡ (Kannada)


**ಸಂಕಲನಕಾರರು**

ಹಿಂದೂ ರಾಷ್ಟ್ರ ಸ್ಥಾಪನೆಯ ಉದ್ಘೋಷಕರು

**ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ**

**ಸೂಕ್ಷ್ಮ-ಜ್ಞಾನ ಪಡೆದವರು**

**ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಮುಕುಲ ಗಾಡಗೀಳ**

**ಸೌ. ಪ್ರಿಯಾಂಕಾ ಸುಯಶ ಗಾಡಗೀಳ ಮತ್ತು ಇತರರು**



**ಸನಾತನ ಸಂಸ್ಥೆ**


**ಸನಾತನದ ಗ್ರಂಥಸಂಪತ್ತಿನ ಅದ್ವಿತೀಯತೆ !**

ಸನಾತನದ ಬಹುತೇಕ ಗ್ರಂಥಗಳಲ್ಲಿನ ಸುಮಾರು ಶೇ. ೨೦ ರಷ್ಟು ಬರವಣಿಗೆಗಳು ‘ಸೂಕ್ಷ್ಮದಿಂದ ಪಡೆದುಕೊಂಡ ದಿವ್ಯ ಜ್ಞಾನ’ವಾಗಿದ್ದು, ಪೃಥ್ವಿಯಲ್ಲಿ ಲಭ್ಯವಿರುವ ಜ್ಞಾನದ ತುಲನೆಯಲ್ಲಿ ಅದು ಅದ್ವಿತೀಯವಾಗಿದೆ !

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : 93424 35617
ಇತರ ದೂ.ಕ್ರ. (ಗೋವಾ) : (0832) 2312664
ವಿ–ಅಂಚೆ : granth@sanatan.org

**ಮುಖಪುಟ ಸಂಕಲ್ಪನೆ :** ಸೌ. ಜಾಹ್ನವಿ ಶಿಂದೆ ಮತ್ತು ಸೌ. ಯೋಗೇಶ್ರೀ ಘೋಳೆ

'ದೃಷ್ಟಿ ತಗಲುವುದು ಮತ್ತು ತೆಗೆಯುವುದು ಇವುಗಳ ಹಿಂದಿನ ಅಧ್ಯಾತ್ಮಶಾಸ್ತ್ರ' ಈ ಮೂಲ ಖಂಡದ (ಮೊದಲ ಆವೃತ್ತಿ : 5.11.2010) ಎರಡು ಆವೃತ್ತಿಗಳು ಪ್ರಕಾಶಿತಗೊಂಡಿವೆ. ಏಪ್ರಿಲ್ 2015 ರಲ್ಲಿ ಈ ಮೂಲ ಖಂಡವನ್ನು 'ದೃಷ್ಟಿ ತೆಗೆಯುವ ವಿಧಗಳು (ಭಾಗ 1)' ಮತ್ತು 'ದೃಷ್ಟಿ ತೆಗೆಯುವ ವಿಧಗಳು (ಭಾಗ 2)' ಈ ಎರಡು ಭಾಗಗಳಲ್ಲಿ ವಿಭಜಿಸಲಾಗಿದೆ. 'ದೃಷ್ಟಿ ತೆಗೆಯುವ ವಿಧಗಳು (ಭಾಗ 1)' ಎಂಬ ಗ್ರಂಥದ ಹೆಸರನ್ನು ಜೂನ್ 2017 ರಲ್ಲಿ (ಮೊದಲ ಆವೃತ್ತಿ, ಎರಡನೇ ಪುನರ್ಮುದ್ರಣ) 'ಉಪ್ಪು–ಸಾಸಿವೆ, ತೆಂಗಿನಕಾಯಿ, ಲಿಂಬೆ ಇತ್ಯಾದಿಗಳಿಂದ ದೃಷ್ಟಿ ಹೇಗೆ ತೆಗೆಯಬೇಕು ?' ಎಂದು ಬದಲಾಯಿಸಲಾಗಿದೆ.

**1st Edition** : Hanuman Jayanthi, Kaliyug Varsh 5117 (4.4.2015)

**3rd Edition** : Ganesh Jayanti, Kaliyug Varsh 5123 (4.2.2022)

**First Reprint** : Navaratrarambha, Kaliyug Varsh 5125 (15.10.2023)

Translated from the original Marathi text 'Meeth-mohari, Naral, Turati Adinni Drusht Kashi Kadhavi ?'
ಪ್ರಸ್ತುತ ಗ್ರಂಥವು ಹಿಂದಿ, ಆಂಗ್ಲ ಮತ್ತು ಗುಜರಾತಿ ಭಾಷೆಗಳಲ್ಲೂ ಲಭ್ಯವಿದೆ.

**ಅನುವಾದಕರು** : ಡಾ. ಪ್ರಕಾಶ ಘಾಳಿ
ಶ್ರೀ. ಗಣೇಶ ರಾಜಾರಾಮ ಕಾಮತ್

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು – 560 010.

**ದೇಣಿಗೆ ಮೌಲ್ಯ** : ₹ 95 /-

**ISBN :** 978-93-92952-39-5 ॐ ಗ್ರಂಥ ಕ್ರ. : 155

© **ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

## ಗ್ರಂಥದ ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)


**೧. 'ದೃಷ್ಟಿ ತಗಲುವುದು' ಎಂದರೇನು ?** ೯

**೨. ದೃಷ್ಟಿ ತಗಲುವುದರ ಹಿಂದಿನ ಸೂಕ್ಷ್ಮದಲ್ಲಿನ ಪ್ರಕ್ರಿಯೆ** ೧೦

**೩. ದೃಷ್ಟಿ ತಗಲಿದುದರ ಪರಿಣಾಮ ಅಥವಾ ದೃಷ್ಟಿ ತಗಲಿದೆ ಎಂಬುದನ್ನು ಗುರುತಿಸುವ ಲಕ್ಷಣಗಳು** ೧೨

* ಸ್ಥೂಲದೇಹ, ಮನೋದೇಹ, ಸೂಕ್ಷ್ಮದೇಹಗಳಿಗೆ ಸಂಬಂಧಿಸಿದ ಲಕ್ಷಣಗಳು ೧೨

**೪. 'ದೃಷ್ಟಿಯನ್ನು ತೆಗೆಯುವುದು' ಎಂದರೇನು ?** ೧೩

**೫. ದೃಷ್ಟಿಯನ್ನು ತೆಗೆಯುವುದರಿಂದಾಗುವ ಲಾಭಗಳು** ೧೪

* ದೃಷ್ಟಿಯನ್ನು ತೆಗೆಯುವುದರಿಂದ ಜೀವದ ಮನಃಶಕ್ತಿಯು ಬಲಶಾಲಿಯಾಗುತ್ತದೆ, ಇದರಿಂದ ಕಾರ್ಯದಲ್ಲಿ ವಿಘ್ನಗಳು ಬರುವುದಿಲ್ಲ ೧೪

**೬. ದೃಷ್ಟಿಯನ್ನು ತೆಗೆಯುವಾಗ ಜೀವದ ಭಾವ ಮಹತ್ವದ್ದಾಗಿದೆ** ೧೫

**೭. ದೃಷ್ಟಿ ತೆಗೆಯುವ ವ್ಯಕ್ತಿಯ ಮೇಲೆ ದೃಷ್ಟಿ ದೂರವಾಗುವ ಫಲನಿಷ್ಪತ್ತಿಯು ಅವಲಂಬಿಸಿರುವುದು** ೧೬

**೮. ದೃಷ್ಟಿಯನ್ನು ತೆಗೆಯುವ ಪದ್ಧತಿ (ಕೇವಲ ಕೃತಿ)** ೧೮

**೯. ದೃಷ್ಟಿಯನ್ನು ತೆಗೆಯುವ ಪದ್ಧತಿಯ ಹಿಂದಿನ ಶಾಸ್ತ್ರ ಮತ್ತು ಅನುಭೂತಿಗಳು** ೨೦

* ದೃಷ್ಟಿಯನ್ನು ತೆಗೆದು ಹೋಗುವಾಗ ದೃಷ್ಟಿಯನ್ನು ತೆಗೆದವನು ಏಕೆ ಹಿಂತಿರುಗಿ ನೋಡಬಾರದು ? ೨೧

**೧೦. ದೃಷ್ಟಿಯನ್ನು ತೆಗೆಯಲು ಉಪಯೋಗಿಸುವ ಘಟಕಗಳು (ಉಪ್ಪು, ಸಾಸಿವೆ, ಕೆಂಪು ಮೆಣಸಿನಕಾಯಿ, ಲಿಂಬೆಕಾಯಿ, ತೆಂಗಿನಕಾಯಿ ಇತ್ಯಾದಿ) ಮತ್ತು ಅವುಗಳಿಂದ ದೃಷ್ಟಿಯನ್ನು ತೆಗೆಯುವ ವಿವಿಧ ವಿಧಗಳು** ೨೫

**೧೧. ದೃಷ್ಟಿ ತಗಲದಿರಲು ಸತತವಾಗಿ ಸಾಧನೆಯನ್ನು ಮಾಡುವುದೇ ನಿಜವಾದ ಉಪಾಯವಾಗಿದೆ** ೬೨

**卐 ಕೆಲವು ಸಾಂದರ್ಭಿಕ ಅಂಶಗಳು** ೬೪

**卐 ಆಧ್ಯಾತ್ಮಿಕ ಪರಿಭಾಷೆಯಲ್ಲಿನ ವೈಶಿಷ್ಟ್ಯಪೂರ್ಣ ಪ್ರಸ್ತಾವನೆ !** ೬೭

**卐 ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ಮತ್ತು ಇತರ ಮಾಹಿತಿ** ೭೧

## 'ದೃಷ್ಟಿ'ಯ ಬಗ್ಗೆ ಸಾರ್ವತ್ರಿಕ ಮನೋಗತ

ಮಕ್ಕಳಿಗೆ ದೃಷ್ಟಿ ತಗಲಬಾರದೆಂದು ಕಾಡಿಗೆಯನ್ನು ಹಚ್ಚುವ ಸಂಸ್ಕಾರವು ಇಂದಿಗೂ ನಡೆದುಕೊಂಡು ಬಂದಿದೆ. ಕೆಲವು ವಯಸ್ಸಾದ ಸ್ತ್ರೀಯರು ಮನೆಗೆ ಬಂದಿರುವ ನೆಂಟರ ಮೇಲಿನಿಂದ ಇಂದಿಗೂ ಲಿಂಬೆ-ಉಪ್ಪುಗಳಿಂದ ದೃಷ್ಟಿಯನ್ನು ತೆಗೆಯುತ್ತಾರೆ. ಯಾವಾಗ ಒಂದು ಪರಂಪರೆಯನ್ನು ನೂರಾರು ವರ್ಷಗಳವರೆಗೆ ಕಾಪಾಡಿಕೊಂಡು ಬರುತ್ತಾರೆಯೋ, ಆಗ ಅದರ ಹಿಂದೆ ಖಂಡಿತವಾಗಿಯೂ ಏನಾದರೊಂದು ಶಾಸ್ತ್ರವಿದೆ ಎಂಬುದನ್ನು ನಾವು ತಿಳಿದುಕೊಳ್ಳಬೇಕು.

ಇಂದಿನ ಸ್ಪರ್ಧಾತ್ಮಕ ಮತ್ತು ಭೋಗವಾದಿ ಯುಗದಲ್ಲಿ ವೈರತ್ವ, ದ್ವೇಷಭಾವ, ಲೋಕೇಷಣ, ಹೆಣ್ಣುಮಕ್ಕಳ ಕಡೆಗೆ ನೋಡುವ ಕೆಟ್ಟ ದೃಷ್ಟಿ ಇತ್ಯಾದಿ ವಿಕೃತಿಗಳಿಗೆ ಬಹುತೇಕ ಜನರು ತೊಂದರೆಗೀಡಾಗಿದ್ದಾರೆ. ಈ ವಿಕೃತಿಗಳ ರಜ-ತಮಾತ್ಮಕ ಸ್ಪಂದನಗಳ ತ್ರಾಸದಾಯಕ ಪರಿಣಾಮವು ಸೂಕ್ಷ್ಮದಲ್ಲಿ ನಮಗೆ ತಿಳಿಯದೇ ಬೇರೆ ವ್ಯಕ್ತಿಗಳ ಮೇಲೆ ಆಗುತ್ತದೆ. ಇದನ್ನೇ ಆ ವ್ಯಕ್ತಿಗೆ 'ದೃಷ್ಟಿ ತಗಲಿದೆ' ಎಂದು ಹೇಳುತ್ತಾರೆ. ಅಲ್ಲದೇ ಕುಟುಂಬಗಳಲ್ಲಿನ ಜಗಳಗಳು, ರೋಗಗಳು, ಹಣಕಾಸಿನ ತೊಂದರೆ, ಕೆಟ್ಟ ಕನಸುಗಳು ಬೀಳುವುದು, ನಿರಾಶೆ, ಸಿಗರೇಟು ಅಥವಾ ಮದ್ಯಪಾನದ ವ್ಯಸನ ಇತ್ಯಾದಿ ಸಮಸ್ಯೆಗಳು ಈಗ ನಿತ್ಯದ ವಿಷಯಗಳಾಗಿವೆ. ಜೀವನದಲ್ಲಿನ ಶೇ. ೮೦ ರಷ್ಟು ಸಮಸ್ಯೆಗಳ ಹಿಂದಿನ ಕಾರಣಗಳು ಸ್ಥೂಲದಲ್ಲಿ ಕಂಡುಬಂದರೂ, ಅವುಗಳ ಮೂಲ ಕಾರಣವು ಸೂಕ್ಷ್ಮದಲ್ಲಿನ, ಅಂದರೆ ಕೆಟ್ಟ ಶಕ್ತಿಗಳ ತೊಂದರೆ ಗಳಿಂದಲೇ ಆಗಿರುತ್ತದೆ. ಕೆಟ್ಟ ಶಕ್ತಿಗಳ ತೊಂದರೆಯೂ ಸಹ ದೃಷ್ಟಿ ತಗಲುವ ಒಂದು ಪ್ರಕಾರವೇ ಆಗಿದೆ.

ಸ್ವಲ್ಪದರಲ್ಲಿ ಹೇಳುವುದಾದರೆ, ಜೀವನದಲ್ಲಿ ನಮಗೆ ತೊಂದರೆಗಳು ಬರಬಾರದು ಮತ್ತು ನಾವು ಆನಂದದಲ್ಲಿ ಇರಬೇಕೆಂದಾದರೆ, ಮನೆಯಲ್ಲಿ ಸುಲಭವಾಗಿ ಮಾಡಬಹುದಾದ ದೃಷ್ಟಿಯನ್ನು ತೆಗೆಯುವ ಆಧ್ಯಾತ್ಮಿಕ ಉಪಾಯ ವನ್ನು ಮಾಡುವುದು ಉಪಯುಕ್ತವಾಗಿದೆ. ಸದ್ಯದ ವಿಜ್ಞಾನಯುಗದಲ್ಲಿ 'ದೃಷ್ಟಿ ತಗಲುವುದು ಮತ್ತು ತೆಗೆಯುವುದು' ಈ ಶಬ್ದಗಳನ್ನು ಉಚ್ಚರಿಸಿದರೂ ಬುದ್ಧಿಜೀವಿ ಗಳು ಅದನ್ನು 'ಹಳೆಯ ಪದ್ಧತಿ' ಎಂದು ಹೀಯಾಳಿಸಿ ಮೂಗು ಮುರಿಯಬಹುದು. ಇಂದಿನ ವಿಜ್ಞಾನಯುಗದಲ್ಲಿ ಪ್ರತಿಯೊಂದು ವಿಷಯವನ್ನು ಶಾಸ್ತ್ರೀಯವಾಗಿ ತಿಳಿಸಿ ಹೇಳಿದರೆ ಅದರ ಮೇಲೆ ವಿಶ್ವಾಸವಿಡುತ್ತಾರೆ. ಆದುದರಿಂದ ದೃಷ್ಟಿಯ ೩ ಖಂಡದಲ್ಲಿ ದೃಷ್ಟಿ ತಗಲುವ ಪ್ರಕ್ರಿಯೆ, ಅದರ ಪರಿಣಾಮ, ಬೇರೆ ಬೇರೆ ವಸ್ತುಗಳಿಂದ ದೃಷ್ಟಿ ತೆಗೆಯುವ ಪದ್ಧತಿ, ಚಿಕ್ಕ ಮಕ್ಕಳ ದೃಷ್ಟಿ ತೆಗೆಯುವ ಸುಲಭ

ಪದ್ಧತಿ, ದೃಷ್ಟಿ ತೆಗೆಯುವಾಗ ವಹಿಸಬೇಕಾದ ಜಾಗ್ರತೆ ಇತ್ಯಾದಿ ವಿಷಯಗಳನ್ನು ತಿಳಿಸಿ ಹೇಳುವುದರೊಂದಿಗೆ ಸ್ಥೂಲದಿಂದ ತಿಳಿಯದಿರುವ ವಿಷಯಗಳನ್ನು ಸೂಕ್ಷ್ಮಪರೀಕ್ಷಣೆ ಮತ್ತು ಸೂಕ್ಷ್ಮಜ್ಞಾನದ ಚಿತ್ರಗಳಿಂದ ಸ್ಪಷ್ಟಪಡಿಸಲಾಗಿದೆ.

ಸನಾತನದ ಸಾಧಕರು ಸಮಷ್ಟಿ ಸಾಧನೆಯನ್ನು ಮಾಡಿ ‘ಈಶ್ವರೀ ರಾಜ್ಯ’ವನ್ನು ಸ್ಥಾಪಿಸಲು ಪ್ರಯತ್ನಿಸುತ್ತಿದ್ದಾರೆ ಮತ್ತು ಕೆಟ್ಟ ಶಕ್ತಿಗಳು ‘ಆಸುರೀ ರಾಜ್ಯ’ವನ್ನು ಸ್ಥಾಪಿಸಲು ಪ್ರಯತ್ನಿಸುತ್ತಿವೆ. ಆದುದರಿಂದ ಕೆಟ್ಟ ಶಕ್ತಿಗಳು ಸಾಧಕರಿಗೆ ದೊಡ್ಡ ಪ್ರಮಾಣದಲ್ಲಿ ವಿವಿಧ ರೀತಿಯಲ್ಲಿ ತೊಂದರೆಗಳನ್ನು ನೀಡುತ್ತಿವೆ. ಸನಾತನದ ಸಾಧಕರಿಗಾಗುತ್ತಿರುವ ಕೆಟ್ಟ ಶಕ್ತಿಗಳ ತೊಂದರೆಗಳನ್ನು ಕಡಿಮೆಗೊಳಿಸಲು ಸನಾತನವು ೨೦೦೧ ನೇ ಇಸವಿಯಿಂದ ಸಾಧಕರ ದೃಷ್ಟಿಯನ್ನು ತೆಗೆಯಲು ಪ್ರಾರಂಭಿಸಿತು. ಸಾಧಕರ ದೃಷ್ಟಿಯನ್ನು ತೆಗೆಯುವ ಮೊದಲಿದ್ದ ಸ್ಥಿತಿ, ದೃಷ್ಟಿ ತೆಗೆದ ನಂತರ ಅವರ ಮೇಲಾದ ಪರಿಣಾಮ ಹಾಗೂ ಅವರಿಗಾದ ಲಾಭ ಇದನ್ನು ಸಾಧಕರ ಅನುಭೂತಿಗಳ ಮಾಧ್ಯಮದಿಂದ ವಿವರಿಸಲಾಗಿರುವುದರಿಂದ ದೃಷ್ಟಿ ತೆಗೆಯುವ ಪದ್ಧತಿಯು ಶಾಸ್ತ್ರೋಕ್ತವಾಗಿದೆ ಎಂದು ಪ್ರಮಾಣಸಹಿತ ಸಿದ್ಧವಾಗುತ್ತದೆ.

ಆದಷ್ಟು ಹೆಚ್ಚು ಜನರು ದೃಷ್ಟಿಯನ್ನು ತೆಗೆಯುವ ಮಹತ್ವವನ್ನು ಅರಿತುಕೊಂಡು, ದೃಷ್ಟಿಯನ್ನು ತೆಗೆಸಿಕೊಂಡು ತಮ್ಮ ಸುತ್ತಲೂ ನಿರ್ಮಾಣವಾಗಿರುವ ತ್ರಾಸದಾಯಕ ಸ್ಪಂದನಗಳ ಆವರಣವನ್ನು ದೂರಗೊಳಿಸಿಕೊಂಡು ಸಾಧನೆಯಿಂದ ಬ್ರಹ್ಮಾಂಡದಲ್ಲಿನ ಈಶ್ವರೀ ಲಹರಿಗಳ ಲಾಭವನ್ನು ಪಡೆದುಕೊಳ್ಳಬೇಕೆಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ ! – **ಸಂಕಲನಕಾರರು**

## ಸನಾತನದ ಇಬ್ಬರೂ ಸದ್ಗುರುಗಳ ಹೆಸರಿಗೆ ವಿಶಿಷ್ಟ ಆಧ್ಯಾತ್ಮಿಕ ಬಿರುದು ಸೇರಿಸಿರುವುದರ ಹಿಂದಿನ ಕಾರಣ

ನಾಡಿಪಟ್ಟಿವಾಚನದ ಮಾಧ್ಯಮದಿಂದ ಸಪ್ತರ್ಷಿಗಳ ಆಜ್ಞೆಗನುಸಾರ ೧೩.೫.೨೦೨೦ ರಿಂದ ಸದ್ಗುರು (ಸೌ.) ಬಿಂದಾ ನೀಲೇಶ ಸಿಂಗಬಾಳರನ್ನು ‘ಶ್ರೀಸತ್‌ಶಕ್ತಿ (ಸೌ.) ಬಿಂದಾ ನೀಲೇಶ ಸಿಂಗಬಾಳ’ ಮತ್ತು ಸದ್ಗುರು (ಸೌ.) ಅಂಜಲಿ ಮುಕುಲ ಗಾಡಗೀಳರನ್ನು ‘ಶ್ರೀಚಿತ್‌ಶಕ್ತಿ (ಸೌ.) ಅಂಜಲಿ ಮುಕುಲ ಗಾಡಗೀಳ’ ಎಂದು ಸಂಬೋಧಿಸಲಾಗುತ್ತಿದೆ. ಈ ಇಬ್ಬರೂ ಸಂತರು ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರ ಆಧ್ಯಾತ್ಮಿಕ ಉತ್ತರಾಧಿಕಾರಿಗಳಾಗಿದ್ದಾರೆ.